# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ</u>

ಪಿ. ಸಿ.ಆರ್. ನಂ.17/2023

ಸಿಡಬ್ಲ್ಯೂ-1

| | |
|---|---|
| ಹೆಸರುಃ | ಶ್ರೀ ದೇವೆಂದ್ರಪ್ಪ |
| ತಂದೆಯ ಹೆಸರುಃ | ಸಾಯಿಬಣ್ಣ |
| ವಯಸ್ಸುಃ | 44 ವರ್ಷ |
| ಉದ್ಯೋಗಃ | ಒಕ್ಕಲುತನ |
| ವಾಸ ಸ್ಥಳಃ | ವಾಲ್ಮಿಕಿ ನಗರ, ಸೇಡಂ |

ದಿನಾಂಕ 12-07-2023

ಪ್ರಮಾಣ ವಚನ ಬೋಧಿಸಲಾಯಿತು.

## <u>ಸಾಕ್ಷಿಯ ಪ್ರಮಾಣಿಕೃತ ಹೇಳಿಕೆ</u>

**<u>ವಿಚಾರಣೆಃ ನ್ಯಾಯಾಲಯದಿಂದ</u>**

ದಿನಾಂಕ 23.04.2023 ರಂದು ನಾನು ವಾಲ್ಮಿಕಿ ನಗರದ ನನ್ನ ಮನೆಯಲ್ಲಿ ಇರುವಾಗ ಮಧ್ಯಾಹ್ನ 01.30 ರಿಂದ 02.00 ಗಂಟೆಯ ಮಧ್ಯೆದಲ್ಲಿ ಸೇಡಂದ ಕೆ.ಇ.ಬ್ ಕಾಲೋನಿಯಲ್ಲಿರುವ ನನ್ನ ಅಣ್ಣನಾದ ಚಂದ್ರಕಾಂತ ತಂದೆ ಸಾಯಿಬಣ್ಣ ನಾಯಿಕೋಡಿ, ಭಾಗ್ಯಲಕ್ಷ್ಮೀ ಗಂಡ ಚಂದ್ರಕಾಂತ, ಗಣೇಶ ತಂದೆ ಚಂದ್ರಕಾಂತ, ದಿನೇಶ ತಂದೆ ಚಂದ್ರಕಾಂತ, ಸಾವಿತ್ರಮ್ಮ ಗಂಡ ಸಾಯಿಬಣ್ಣ ಇವರು ನಮ್ಮ ಮನೆಗೆ ಬಂದು ನಾಳೆ 18 ನೇ ತಾರೀಖಿನಂದು ಪ್ರಕರಣದ ತೀರ್ಪು ಇರುತ್ತದೆ ನಿನ್ನ ಪರವಾಗಿ ಆದೇಶ ಆದ್ದಲ್ಲಿ ನಿನ್ನನ್ನು ಖಲ್ಲಾಸ ಮಾಡುತ್ತೇವೆ ಅಂತಾ ಅಂದಿರುತ್ತಾರೆ. ಆಗ ನಾನು ಗುಲಬರ್ಗಾಕ್ಕೆ ಹೋಗಿ ಎಸ್.ಪಿ. ಅವರಲ್ಲಿ ದೂರು ಸಲ್ಲಿಸಿರುತ್ತೇನೆ. ಅದಾದ ನಂತರ ನನಗೆ ಮೇಲಿಂದ ಮೇಲೆ ಅವರು ಜೀವ ದಮಕಿ ಹಾಕುತ್ತಾ ಬಂದಿದ್ದು ದಿನಾಂಕ 24.05.2023 ರಂದು ಸಾಯಂಕಾಲ 04.00 ರಿಂದ 04.30 ಗಂಟೆಗೆ 5 ಜನರು ಕೂಡಿಕೊಂಡು ಬಂದು ನನಗೆ ಕಟ್ಟಿಗೆಯಿಂದ ಹೊಡೆದಿರುತ್ತಾರೆ. ಅವರು ನನಗೆ ಕಟ್ಟಿಗೆಯಿಂದ ಕಾಲಿಗೆ ಹೊಡೆದಿರುತ್ತಾರೆ. ನಂತರ ನಾನು ಸೇಡಂ ಪಿ.ಎಸ್.ಐ. ಮತ್ತು ಸಿ.ಪಿ.ಐ. ರವರಿಗೆ ದೂರು ಕೊಟ್ಟಿರುತ್ತೇನೆ. ಅದೇ ರೀತಿ ಎಸ್.ಪಿ. ಅವರಿಗೂ ಸಹ ದೂರು ಕೊಟ್ಟಿರುತ್ತೇನೆ. ಅದಾದ ನಂತರ ದಿನಾಂಕ 26.05.2023 ರಂದು 5 ಜನರು ಕೂಡಿ ನನಗೆ ಕಟ್ಟಿಗೆಯಿಂದ ನನ್ನ ಹೆಂಡತಿಗೂ ಹೊಡೆದಿರುತ್ತಾರೆ. ಚಂದ್ರಕಾಂತ ಇತ ನನ್ನ ಕುತ್ತಿಗೆಯನ್ನು ಕೈಯಿಂದ ಹಿಡಿದು ಕೆಳಗೆ ಹಾಕಿರುತ್ತಾನೆ ಮತ್ತು ಎಲ್ಲರೂ ನನಗೆ ಹೊಡೆದಿರುತ್ತಾರೆ. ಆಗ ನನ್ನ ಹೆಂಡತಿ, ಮಕ್ಕಳು ಚಿರಾಟ ಮಾಡಲು ಓಣಿಯ ಜನರು ಬಂದು ಜಗಳ ಬಿಡಿಸಿರುತ್ತಾರೆ. ನನಗೆ ನನ್ನ ತಾಯಿ ತಂದೆ ದಾನ ನೀಡಿದ ಆಸ್ತಿಯು ನಿನ್ನ ಪರವಾಗಿ ಆಗಿದೆ ಅದನ್ನು ನನ್ನ ಹೆಸರಿಗೆ ಬರೆದುಕೊಡುವಂತೆ ಅಂದಿರುತ್ತಾರೆ ಇಲ್ಲದಿದ್ದರೆ ನಿನ್ನನ್ನು ಕೊಲೆ ಮಾಡುತ್ತೇನೆ ಅಂತಾ ಹೇಳಿರುತ್ತಾರೆ. ನನ್ನ ತಂದೆಯವರಿಗೂ ಸಹ ಈ ಹಿಂದೆ ಅವರು ತೊಂದರೆ ನೀಡಿರುತ್ತಾರೆ. ಈ ಕುರಿತು ನನ್ನ ತಂದೆ ಡೆತ್ ನೋಟ್ ಸಹ ಬರೆದಿರುತ್ತಾರೆ. ಪೊಲೀಸರು ಇಲ್ಲಿವರೆಗೂ ಏನು ಕ್ರಮ

ತೆಗೆದುಕೊಂಡಿರುವುದಿಲ್ಲ. ನಮ್ಮದು 39 ಎಕರೆ ಜಮೀನು ಹಾಗೂ 3 ಬಿಲ್ಡಿಂಗಗಳು ಇದ್ದು ಎಲ್ಲ ಆಸ್ತಿಯನ್ನು ಆತನೇ ತೆಗೆದುಕೊಂಡು ನನ್ನ ಮೇಲೆ ದಬ್ಬಾಳಿಕೆ ಮಾಡಿರುತ್ತಾನೆ.

ನಾನು ದಿನಾಂಕ 17.04.2023 ರಂದು ಜಿಲ್ಲಾ ಪೊಲೀಸ್ ಆಧೀಕ್ಷಕರಿಗೆ ನೀಡಿದ ದೂರಿನ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ-1 ಮತ್ತು 2 ಎಂದು ಗುರುತಿಸಲಾಯಿತು. ಮಾನ್ಯ ಆರಕ್ಷಕ ಉಪನಿರೀಕ್ಷಕರು ಪೊಲೀಸ್ ಠಾಣೆ ಸೇಡಂ ಇವರಿಗೆ ದಿನಾಂಕ 24.05.2023 ರಂದು ನೀಡಿದ ದೂರಿನ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಅಸಲು ದಾವಾ ನಂ.15/2016 ರ ಆದೇಶದ ಮತ್ತು ಡಿಕ್ರಿಯ ದೃಢಿಕೃತ ನಕಲು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು.

ಆದ್ದರಿಂದ ಎದುರುದಾರರ ವಿರುದ್ಧ ಕಾನೂನು ರೀತಿ ಕ್ರಮ ಜರುಗಿಸಿ ಅವರಿಗೆ ಸಮನ್ಸ್ ಹೊರಡಿಸಲು ಪ್ರಾರ್ಥಿಸುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ. ಸೇಡಂ.

*SYH